

## ಪ್ರಥಮ ನೋಟದ ಪ್ರೇಮ

ಪ್ರಥಮ ನೋಟದ ಪ್ರೇಮ ಸಾಧ್ಯವೇ? ಅಥವಾ ಇವೆಲ್ಲಾ ನಮ್ಮ ಸಿನಿಮಾ ಸಾಹಿತ್ಯಗಳ ಕಲ್ಪನೆಯೇ?

ಪ್ರಥಮ ನೋಟದಲ್ಲಿಯೇ ಪ್ರೇಮದ ಮಹಾಪೂರವುಂಟಾಗಿ ಜೀವನಪರ್ಯಂತ ಸಂಗಾತಿಗಳಾಗಿ ಬದುಕಿದವರು ಎಲ್ಲಾಕಡೆ ಸಿಗುತ್ತಾರೆ. ಅಂದ ಮೇಲೆ ಅದು ಇದೆ. ಆದರೆ ನಮ್ಮ ಸಿನಿಮಾದವರು ಅದನ್ನು ವೈಭಕವೀಕರಿಸಿರುತ್ತಾರೆ. ಸಾಕಷ್ಟು ಪ್ರಾಣಿವರ್ಗಗಳಲ್ಲಿಯೂ ಪ್ರಥಮ ನೋಟದ ಪ್ರೇಮವಿದೆಯೆಂದು ದಾಖಲಿಸಲಾಗಿದೆ. ವಾಸನಾಗ್ರಹಣ ಶಕ್ತಿ ಹೆಚ್ಚಾಗಿರುವ ಪ್ರಾಣಿಗಳಲ್ಲಿ ಇದು ಪ್ರಥಮ ಮೂಸುವಿಕೆಯ ಪ್ರೇಮವೂ ಆಗಬಹುದು! ಪ್ರಥಮ ನೋಟದ ಪ್ರೇಮ ಹೇಗೆ ಉಂಟಾಗುತ್ತದೆ ಎಂದು ವೈಜ್ಞಾನಿಕವಾಗಿ ವಿವರಿಸುವುದು ಸಾಧ್ಯವಾಗಿಲ್ಲ. ಎರಡು ಸಂಕೀರ್ಣವಾದ ಮಾನವ ಮಿದುಳುಗಳು ಕ್ಷಣಮಾತ್ರದಲ್ಲಿ ಆಕರ್ಷಣೆಗೊಳಗಾಗುವ ಪ್ರಕ್ರಿಯೆಯನ್ನು ವಿಶ್ಲೇಷಣೆ ಮಾಡುವುದಾದರೂ ಹೇಗೆ?

## ಸ್ತ್ರೀ - ಪುರುಷರ ವ್ಯತ್ಯಾಸ

ಹೆಂಗಸರು ಬುದ್ಧಿವಂತರೆಂದು ತೋರಿಸಿಕೊಳ್ಳುವುದಕ್ಕಿಂತ ಸುಂದರವಾಗಿ ಕಾಣಿಸಿಕೊಳ್ಳಲು ಏಕೆ ಇಷ್ಟ ಪಡುತ್ತಾರೆಂದರೆ ಗಂಡಸರ ಬುದ್ಧಿಗಿಂತ ನೋಟ ಚುರುಕು! ಸಂಶೋಧನೆಗಳೂ ಇದನ್ನೇ ಹೇಳುತ್ತವೆ. ಗಂಡಸರು ನೋಟಕ್ಕೆ ಮರುಳಾಗುವುದು ಪ್ರಕೃತಿಯ ನಿರ್ಧಾರ. ಗರ್ಭ ಧರಿಸಿದ ಅಥವಾ ಮಕ್ಕಳ ಪೋಷಣೆಯಲ್ಲಿರುವ ಸ್ತ್ರೀಯರನ್ನು ಕಾಡುಪ್ರಾಣಿಗಳಿಂದ ಶತ್ರುಗಳಿಂದ ರಕ್ಷಿಸುವ ಹೊಣೆಯನ್ನೂ ಪ್ರಕೃತಿ ಅನಾದಿಕಾಲದಿಂದಲೂ ಗಂಡಿಗೇ ನೀಡಿದೆ.

ಭಗ್ನಪ್ರೇಮ ಯುವಕರ ಮೇಲೆ ಹೆಚ್ಚಿನ ಆಘಾತವನ್ನು ಉಂಟು ಮಾಡುತ್ತದೆ. ಏಕೆಂದರೆ ಪುರುಷರಿಗೆ ಅತಿಕಡಿಮೆ ಆತ್ಮೀಯರಿರುತ್ತಾರೆ. ಈಸ್ಟ್ರೋಜೆನ್ ರಾಸಾಯನಿಕ ಪ್ರಭಾವದಿಂದ ಭಾಷೆಯಲ್ಲಿ ಹೆಚ್ಚು ಸಕ್ಷಮರಾಗಿರುವ ಸ್ತ್ರೀಯರು ಸಂಭಾಷಣೆಯ ಮೂಲಕ ಹೆಚ್ಚಿನ ಸ್ನೇಹ ಸಂಪಾದಿಸಬಲ್ಲರು. ಹಾಗಾಗಿ ದುಖವನ್ನು ಮರೆಯುವುದು ಸ್ತ್ರೀಯರಿಗೆ ಪುರುಷರಿಗಿಂತ ಸುಲಭ.

ಸ್ತ್ರೀಯರ ಪ್ರಣಯದಲ್ಲಿ ಭಾವನೆಗಳು ಹೆಚ್ಚಾಗಿರುತ್ತದೆ ಎಂದು ಮಿದುಳಿನ ಸ್ಕ್ಯಾನ್ ಫಲಿತಾಂಶಗಳು ತೋರಿಸಿದೆ. ಹಾಗಾಗಿ ಪ್ರೇಮ ಸಂದೇಶಗಳು, ಉಡುಗೊರೆಗಳಿಗೆ ಅವರು ಹೆಚ್ಚಿನ ಮಹತ್ವ ನೀಡುತ್ತಾರೆ. ಎಲ್ಲವನ್ನೂ ಮುಕ್ತವಾಗಿ ಹಂಚಿಕೊಳ್ಳುವವರತ್ತ ಅವರು ಹೆಚ್ಚು ಆಕರ್ಷಿತರಾಗುತ್ತಾರೆ. ಕಣ್ಣಿನಲ್ಲಿ ಕಣ್ಣಿಟ್ಟು ನೋಡುವುದು ಅವರಿಗೆ ಹೆಚ್ಚು ಉತ್ತೇಜನಕಾರಿ. ಗಂಡು ಪ್ರಿಯತಮೆಯ ಸನ್ನಿಧಿಯಲ್ಲಿಯೂ ಸುತ್ತಲೂ ಆಗಾಗ ನೋಟ ಮತ್ತು ಗಮನವನ್ನು ಹರಿಸುತ್ತಲೇ ಇರುತ್ತಾನೆ. ಇದರಿಂದ ಅವಳಿಗೆ ಪ್ರೀತಿಯ ರಸಭಂಗವಾಗುತ್ತದೆ!

ಮತ್ತು ನೋರೆಪಿನಪ್ರೈನ್ ರಾಸಾಯನಿಕಗಳ ಮಟ್ಟ ಪ್ರಣಯಿಗಳನ್ನು ಇನ್ನೂ ಹೆಚ್ಚು ಉದ್ದೀಪಿಸುತ್ತದೆ. ಒತ್ತಡದ ಹಾರ್ಮೋನ್‌ಗಳ ಹೆಚ್ಚಾದ ಸೃಜನೆ ಹಸಿವು ನಿದ್ದೆ ನೀರಡಿಕೆಗಳನ್ನು ದೂರ ಮಾಡುತ್ತದೆ.

ತಿರಸ್ಕೃತರು ವಾಸ್ತವವನ್ನು ಒಪ್ಪಿಕೊಳ್ಳದೆ ಕಳೆದುಕೊಂಡ ಪ್ರೇಮವನ್ನು ಮತ್ತೆ ಪಡೆಯುವ ಎಲ್ಲಾ ಪ್ರಯತ್ನವನ್ನೂ ಮಾಡುತ್ತಾರೆ. ಇಂತಹ ತೀವ್ರ ಪ್ರತಿಭಟನೆ ಮತ್ತು ಪ್ರಯತ್ನ ಕೆಲವೊಮ್ಮೆ ಯಶಸ್ವಿಯೂ ಆಗಿ ಪ್ರೇಮಿ ಮತ್ತೆ ಅವರ ಕೈಗೆಟುಕಬಹುದು! ಆದರೆ ಭಗ್ನಪ್ರೇಮಿಗಳ ಹತಾಶೆ ಕೋಪ ವ್ಯಗ್ರತೆಗೆ ತಿರುಗುತ್ತದೆ. ನಮ್ಮ ಮಿದುಳಿನಲ್ಲಿಯೇ ಪ್ರೀತಿ ಮತ್ತು ದ್ವೇಷದ ವ್ಯವಸ್ಥೆಗಳು ಪೂರಕವಾಗಿರುವಾಗ ತಿರಸ್ಕೃತ ಪ್ರೇಮವನ್ನು ನಿಭಾಯಿಸುವುದು ಸುಲಭವಲ್ಲ.

ಎಲ್ಲಾ ಪ್ರತಿಭಟನೆಯನ್ನೂ ಮೀರಿ ಪ್ರೇಮ ಕಳೆದುಹೋಗುವುದು ಖಾತ್ರಿಯಾದಾಗ ಎರಡನೇ ಹಂತದಲ್ಲಿ ಹತಾಶೆ, ದುಖ ಆವರಿಸುತ್ತದೆ. ಇತರ ಸಂಬಂಧಗಳನ್ನು ಕಡೆಗಣಿಸುತ್ತಾ ಪ್ರೇಮಿ ಅಂತರ್ಮುಖಿಯಾಗುತ್ತಾನೆ. ಮಾನವ ಶಾಸ್ತ್ರಜ್ಞರ ಪ್ರಕಾರ ಹೀಗೆ ಕ್ರಿಯಾಶೀಲತೆಯನ್ನು ಕಳೆದುಕೊಳ್ಳುವದರ ಹಿಂದೆ ಕೂಡಾ ಪ್ರಕೃತಿಯ ಕೈವಾಡವಿದೆ. ಪ್ರೇಮವನ್ನು ಉಳಿಸಿಕೊಳ್ಳುವ ಹಿಂಪಡೆದುಕೊಳ್ಳುವ ಭರದಲ್ಲಿ ದುಂದುವೆಚ್ಚ ಮಾಡಿದ್ದ ದೈಹಿಕ ಮಾನಸಿಕ ಶಕ್ತಿಯನ್ನು ಮತ್ತೆ ಗಳಿಸಲು ಇದು ಸಹಾಯಮಾಡುತ್ತದೆ. ಅಂತರ್ಮುಖಿಯಾದಾಗ ಆತ್ಮವಿಮರ್ಶೆ ಮಾಡಿಕೊಳ್ಳುವುದು ಸುಲಭವಾಗುವುದರಿಂದ ಮುಂದಿನ ಸಂಬಂಧಗಳಲ್ಲಿ ಗಟ್ಟಿತನ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದರೆ ಭಗ್ನಪ್ರೇಮ ದೀರ್ಘಕಾಲದ ಖಿನ್ನತೆಯಾಗದಂತೆ ಎಚ್ಚರ ವಹಿಸಬೇಕಷ್ಟೇ.

## ಪ್ರೇಮರೋಗಕ್ಕೆ ಮದ್ದುಂಟೇ?

ನನ್ನ ಬಳಿಗೆ ಆಪ್ತಸಮಾಲೋಚನೆಗೆ ಬಂದ ಒಂದು ಕೇಸ್ ಸ್ಟಡಿ ಹೀಗಿದೆ:

ಆಕೆ ಸುಮಾರು 30 ವರ್ಷದ ವಿವಾಹಿತೆ. ಮದುವೆಯಾಗಿ 7 ವರ್ಷಗಳಾಗಿದ್ದು 5 ವರ್ಷದ ಮಗನಿದ್ದಾನೆ. ಮದುವೆಗಿಂತ ಮೊದಲು ಪ್ರೇಮಿಸಿದ ಯುವಕನನ್ನು ಇನ್ನೂ ಮರೆಯಲಾಗದೆ ಪ್ರೀತಿಸುವ ಗಂಡನಿಗೆ ಮನಸ್ಸನ್ನು ತೆರೆಯಲಾಗದೆ ತೀವ್ರ ಗೊಂದಲ ಹತಾಶೆಗಳಿಂದ ಬಳಲಿದ್ದಳು. ಪ್ರತಿದಿನ ಒಂದು ಗಂಟೆಯಂತೆ ಮೂರು ದಿನ ಮಾತನಾಡಿದ ನಂತರ ನಮ್ಮಿಬ್ಬರ ನಡುವೆ ಮಾನಸಿಕ ಚಿಕಿತ್ಸೆಗೆ ಅಗತ್ಯವಾದ ಆತ್ಮೀಯತೆ ಮೂಡಿದೆ ಎನ್ನಿಸಿತ್ತು. ಆದರೆ ನಾಲ್ಕನೆ ದಿನದಿಂದ ಆಕೆ ನಾಪತ್ತೆಯಾಗಿಟ್ಟಳು! ಕಾರಣ ತಿಳಿದುಕೊಳ್ಳಲು ಮೂರನೆಯ ದಿನದ ನಮ್ಮ ಮಾತುಕತೆಯನ್ನು ಮತ್ತೆ ವಿಮರ್ಶೆ ಮಾಡಿದೆ. ನಾನು ಅಗತ್ಯಕ್ಕಿಂತ ಹೆಚ್ಚಿನ ತರ್ಕವನ್ನು ಬಳಸಿ ಅವಳ ಹಳೆಯ ನೆನಪುಗಳು ಮುಂದಿನ ಜೀವನಕ್ಕೆ ಹೇಗೆ ತೊಂದರೆಯಾಗಬಹುದು ಎಂದು ಮನವರಿಕೆ ಮಾಡಿಕೊಡಲು ಪ್ರಯತ್ನ ಮಾಡಿದ್ದೆ. ಇದು ಅವಳಿಗೆ ಗೊತ್ತಿಲ್ಲದ ವಿಷಯವೇನಲ್ಲ. ತರ್ಕದಿಂದ ಸಮಾಧಾನ ಸಿಗದಿದ್ದಕ್ಕಾಗಿಯೇ ಅವಳು ನನ್ನ ಬಳಿ ಬಂದಿದ್ದಳು. ನಾನೂ ಅದೇ ಪ್ರಯತ್ನ ಮಾಡಿದಾಗ ಅವಳಿಗೆ ಆಪ್ತಸಮಾಲೋಚನೆ ಅನಗತ್ಯ ಎನ್ನಿಸಿರಬಹುದು.

ಅಮೆರಿಕಾದ ಸುಪ್ರಸಿದ್ಧ ಮನೋಚಿಕಿತ್ಸಕ ಇರ್ವಿನ್ ಯಾಲೋಮ್ ಕೂಡ ಪ್ರೇಮಿಗಳಿಗೆ ಯಶಸ್ವಿಯಾಗಿ ಮನೋಚಿಕಿತ್ಸೆ ಮಾಡುವುದು ಕಷ್ಟಸಾಧ್ಯ ಎನ್ನುತ್ತಾನೆ. ‘ಲವ್ಸ್ ಎಕ್ಸಿಕ್ಯೂಷನರ್’ ಎನ್ನುವ ಪುಸ್ತಕದಲ್ಲಿ ತನ್ನ ಒಂದು ಅನುಭವದ ಮೂಲಕ ಇದರ ಬಗೆಗೆ ಹೇಳಿದ್ದಾನೆ. ಪ್ರೇಮವಂಚಿತರು ವಾಸ್ತವಿಕತೆಯಿಂದ ದೂರಹೋಗಿ ತಮ್ಮದೇ ಭ್ರಮೆಯಲ್ಲಿ ಬದುಕುತ್ತಿರುತ್ತಾರೆ. ಅಂತಹ ಭ್ರಮೆಯಲ್ಲಿಯೇ ಅದ್ಭುತ ಸುಖವಿದೆ ಎಂದುಕೊಂಡವರಿಗೆ ವಾಸ್ತವಿಕತೆಯ ಅರಿವನ್ನು ಹೇಗೆ ಮೂಡಿಸುವುದು? ಭ್ರಮೆಯಿಂದ ಹೊರಬರಬೇಕು ಎಂದು ಅವರಿಗೆ ಅನ್ನಿಸಿದ ನಂತರವೇ ಅವರು ವಾಸ್ತವಕ್ಕೆ ಬರಲು ಪ್ರಯತ್ನಿಸುತ್ತಾರೆ.

ಆತ್ಮೀಯ ಸ್ನೇಹಿತರು ಮತ್ತು ಅರ್ಥಮಾಡಿಕೊಳ್ಳುವ ಕುಟುಂಬದವರು ಪ್ರೇಮರೋಗದಿಂದ ಹೊರಬರುವುದಕ್ಕೆ ಸಹಾಯ ಮಾಡಬಲ್ಲರು. ತಜ್ಞರಿಂದ ಮನೋಚಿಕಿತ್ಸೆ ಸ್ವಲ್ಪ ನಿಧಾನವಾಗಿಯಾದರೂ ಪ್ರೇಮರೋಗಕ್ಕೆ ಸಾಂತ್ವನ ನೀಡುತ್ತದೆ. ಸಮಯ ಸರಿದಂತೆ ಕಳೆದುಕೊಂಡ ಪ್ರೇಮವೂ ಹಸಿರಾದ ನೆನಪಾಗಿ ಉಳಿಯಬಹುದು.

ಪ್ರೀತಿಯೆನ್ನುವುದು ಕೇವಲ ಒಂದು ಭಾವನೆಯಲ್ಲ, ಹಸಿವು ನೀರಡಿಕೆಗಳಂತೆ ಜೀವಿಗಳ ಮೂಲಭೂತ ಅಗತ್ಯ ಎಂದು ಹೇಳಲಾಗುತ್ತದೆ. ಪ್ರೀತಿ ಮೂಡುವುದು ಎಷ್ಟು ಸಹಜವೋ ಅದನ್ನು ಕಳೆದುಕೊಳ್ಳುವುದೂ ಅಷ್ಟೇ ಸಾಮಾನ್ಯ. ಅದನ್ನು ಗಳಿಸಿಕೊಳ್ಳುವುದರ ಒಳಗೇ ಕಳೆದುಕೊಳ್ಳುವ ಸಾಧ್ಯತೆಗಳು ಅಡಗಿರುತ್ತದೆ. ಪ್ರೇಮವನ್ನು ಕಳೆದುಕೊಳ್ಳುವ ಭಯದಲ್ಲಿ ಗಳಿಸುವುದನ್ನು ನಿಲ್ಲಿಸಲು ಹೇಗೆ ಸಾಧ್ಯ?

(ಲೇಖಕರ ಸಂಪರ್ಕ: 9480505258)